

# ಅತ್ಯಂತ ದೊಡ್ಡ ಗುಹೆ



ಗುಹೆಯೊಂದು ತನ್ನದೇ ಆದ ನದಿ, ಕಾಡು ಅಷ್ಟೇ ಏಕೆ ವಿಶಿಷ್ಟವಾದ ಹವಾಗುಣವನ್ನು ಹೊಂದಿದೆ ಅಂದರೆ ಅದು ಬಹುಶಃ ವಿಯೆಟ್ನಾಂನ ಸನ್ ಡೂಂಗ್ ಎನ್ನುವ ಗುಹೆ ಮಾತ್ರ.

ಇದಕ್ಕೆ ವಿಶ್ವದ ಅತ್ಯಂತ ದೊಡ್ಡ ಗುಹೆ ಎಂಬ ಖ್ಯಾತಿಯೂ ಇದೆ. 200 ಮೀಟರ್ ಎತ್ತರವಿದ್ದು, 150 ಮೀಟರ್ ಅಗಲವಿದೆ. ಹೆಚ್ಚುಕಮ್ಮಿ 5 ಕಿ.ಮೀ ಉದ್ದವಿದೆ. ಇದನ್ನು ವಿಯೆಟ್ನಾಂನ ದೊಡ್ಡ ಗೋಡೆ ಎಂದೂ ಕರೆಯುತ್ತಾರೆ.

ಈ ಗುಹೆಯ ಪ್ರವೇಶದ್ವಾರವನ್ನು 1991ರಲ್ಲಿ ಸ್ಥಳೀಯ ರೈತ ಹೋ ಖನ್ಹಾ ಮೊದಲ ಬಾರಿಗೆ ಪತ್ತೆ ಹಚ್ಚಿದರು. ಅಲೋಸ್ ಮರದ ಸೌದೆಯನ್ನು ಕಾಡಿನಲ್ಲಿ ಹುಡುಕುತ್ತಿರುವಾಗ ಜೋರಾದ ಮಳೆಯಲ್ಲಿ ಕಾಡಿನ ಮಧ್ಯೆ ಸಿಲುಕಿಕೊಂಡಿದ್ದರು. ಆಶ್ರಯಕ್ಕಾಗಿ ಹುಡುಕುತ್ತಿರುವಾಗ ಈ ಗುಹೆ ಕಂಡಿತು.

ಕೇವಲ ಆಶ್ರಯಕ್ಕಾಗಿ ಗುಹೆಯಲ್ಲಿ ನೆಲೆ ನಿಂತ ಕಾರಣ, ಇದರ ವಿಶಿಷ್ಟತೆಯ ಬಗ್ಗೆ ಖನ್ಹಾ ಅಷ್ಟೇನೂ ತಲೆಕೆಡಿಸಿಕೊಂಡಿರಲಿಲ್ಲ. ಇದಾಗಿ 15 ವರ್ಷಗಳ ಕಾಲ ಗುಹೆಯ ಬಗ್ಗೆ ಯಾರಿಗೂ ತಿಳಿದಿರಲಿಲ್ಲ. 2006ರಲ್ಲಿ ಬ್ರಿಟಿಷ್ ಗುಹೆ ಸಂಶೋಧನಾ ಸಂಘಟನೆಯು ಇದರ ಬಗ್ಗೆ ಆಳವಾದ ಅಧ್ಯಯನ ಕೈಗೊಂಡಿತು. 25 ಲಕ್ಷ ವರ್ಷಗಳ ಹಿಂದೆ ಈ ಗುಹೆಯು ರೂಪುಗೊಂಡಿರಬಹುದು ಎಂದು ಅಂದಾಜಿಸಲಾಗಿದೆ.

■ ರೂಪಾ ಕೆ.ಎಂ.